C.R.P.67

Form No.4 (Civil)
Deposition Sheets
(R.P.No.57)

**6 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್ ಸಿ ಸಂಖ್ಯೆಃ 296/2018**

**ಪ್ರಾಸಾ.24 ಚಾಸಾ.2**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಗಜೇಂದ್ರ |
| **ತಂದೆ/ಗಂಡನ ಹೆಸರು** | : | ರಾಮಚಂದ್ರ |
| **ವಯಸ್ಸು** | : | 24 ವರ್ಷಗಳು |
| **ಉದ್ಯೋಗ** | : | ಬಟ್ಟೆ ಅಂಗಡಿಯಲ್ಲಿ ಕೆಲಸ |
| **ವಾಸ** | : | ಕೋಲಾರ |

**ಪ್ರಮಾಣ ವಚನ ಬೋಧಿಸಿದ ದಿನಾಂಕಃ 18.07.2022**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತಿಲ್ಲ . ಚಾಸಾ-1 ನನಗೆ ಗೊತ್ತಿಲ್ಲ. ಚಾಸಾ-3 ರಿಂದ 8 ಗೊತ್ತಿಲ್ಲ. ಮೃತೆ ಕವಿತಾ ನನಗೆ ಗೊತ್ತಿಲ್ಲ.

2017 ರಲ್ಲಿ ಕೋಲಾರದ ಹೆಚ್ ಕ್ರಾಸ್ ನಲ್ಲಿರುವ ಡಾಬಾದಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದೆ. ಡಾಬಾವನ್ನು ಯಾರು ನಡೆಸುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಸುಮಾರು 5 ವರ್ಷದ ಹಿಂದೆ ಮಧ್ಯಾಹ್ನ 12.00 ಗಂಟೆಗೆ ನನ್ನ ತಾಯಿ ಆಸ್ಪತ್ರೆಗೆ ಹೋಗಬೇಕೆಂದು ಕರೆದರು. ಆಗ ನಾನು ಮನೆಗೆ ಹೋಗಿರುತ್ತೇನೆ. ನಂತರ ಆ ಡಾಬಾದಲ್ಲಿ ಏನಾಯಿತು ಎಂದು ನನಗೆ ಗೊತ್ತಾಗಲಿಲ್ಲ. ಈ ಪ್ರಕರಣಕ್ಕೆ

ಸಂಬಂಧಪಟ್ಟಂತೆ ನನಗೆ ಯಾವುದೆ ವಿಚಾರ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಕಡತದಲ್ಲಿರುವ ಅಂಶಗಳನ್ನು ಪರಿಗಣಿಸಲಾಗಿ ಸಾಕ್ಷಿದಾರರು ಅಭಿಯೋಜನೆಯ ಕೇಸಿಗೆ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿರುವುದು ಕಂಡುಬರುತ್ತದೆ. ಈ ಕಾರಣದಿಂದ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅವರನ್ನು ಪಾಟೀ ಸವಾಲಿಗೆ ಒಳಪಡಿಸಲು ಮಾನ್ಯ ಸರ್ಕಾರಿ ಅಭಿಯೋಜಕರಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>**

1. ನವೆಂಬರ್ 2017 ರ 3 ತಿಂಗಳುಗಳ ಹಿಂದೆ ನಾನು ಕವಿತಾ ಮತ್ತು ರಮೇಶ್ ರವರು ನಡೆಸುತ್ತಿದ್ದ ಡಾಬಾಗೆ ಸಪ್ಲೈರ್ ಆಗಿ ಕೆಲಸಕ್ಕೆ ಸೇರಿದ್ದೆ ಎಂದರೆ ಸರಿ. ನಾನು ಕೆಲಸವನ್ನು ಮುಗಿಸಿ, ಡಾಬಾದಲ್ಲಿ ಮಲಗುತ್ತಿದ್ದೆ ಎಂದರೆ ಸರಿ. ಘಟನೆ ನಡೆಯುವ 15 ದಿವಸಗಳ ಹಿಂದೆ 1 ನೇ ಆರೋಪಿ, 4 ನೇ ಆರೋಪಿ ಮತ್ತು ಚಾಸಾ-7 ವಿಜಯ್ ಕುಮಾರ್ ರವರು ಡಾಬಾಗೆ ಬಂದು ಮೃತೆ ಕವಿತಾ ರವರಿಗೆ ಈ ಡಾಬಾ ನಮಗೆ ಸೇರಿದ್ದು, ನೀವು ಡಾಬಾವನ್ನು ಖಾಲಿ ಮಾಡಿಕೊಡಿ ಎಂದು ಹೇಳಿ ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ.

2. ದಿನಾಂಕ 17.11.2017 ರಂದು ಮೃತೆ ಕವಿತಾ ಮತ್ತು ರಮೇಶ್ ರವರು ಡಾಬಾಗೆ ರಜೆಯನ್ನು ಮಾಡಿ, ಬೆಂಗಳೂರಿಗೆ ಹೋಗಿ ಬರುವುದಾಗಿ ಹೇಳಿ, ನನಗೆ ಡಾಬಾವನ್ನು ನೋಡಿಕೊಳ್ಳುವಂತೆ ತಿಳಿಸಿ ಹೋಗಿದ್ದರು ಎಂದರೆ ಸರಿ. ಅದೇ ದಿವಸ ಸಂಜೆ 5.45 ಗಂಟೆ ಸಮಯದಲ್ಲಿ 1 ನೇ ಆರೋಪಿ, 4 ನೇ ಆರೋಪಿ ಚಾಸಾ-7 ಮತ್ತು 1 ನೇ ಆರೋಪಿಯ ಕಡೆಯ

ಇನ್ನಿಬ್ಬರೂ ಡಾಬಾದ ಒಳಗೆ ಹೋಗಲು ಬಂದರು, ನಾನು ಒಳಗೆ ಹೋಗಬೇಡವೆಂದು ಹೇಳಿದರು ಸಹ ಕೇಳದೆ 4 ನೇ ಆರೋಪಿ ತನ್ನ ಕೈಗಳಿಂದ ನನ್ನ ಮುಖ ಮತ್ತು ತಲೆ ಮೇಲೆ ಹೊಡೆದ. ನಂತರ ನಾನು ಹೆಚ್ ಕ್ರಾಸ್ ಗೆ ಹೋಗಿ, ಕವಿತಾಳ ಸಂಬಂಧಿ ಚಾಸಾ-8 ಲೋಕೇಶ್‌ನನ್ನು ಕರೆದುಕೊಂಡು ಬಂದೆ ಎಂದರೆ ಸರಿಯಲ್ಲ. ಚಾಸಾ-8 ರವರು ಯಾಕೆ ಈ ರೀತಿ ಸಾಮಾನುಗಳನ್ನು ತುಂಬಿಕೊಳ್ಳುತ್ತಿದೀರಿ ಎಂದು ಕೇಳಿದ್ದಕ್ಕೆ, 1 ನೇ ಆರೋಪಿ ಡಾಬಾದಲ್ಲಿದ್ದ ಚಾಕುವಿಂದ ಚಾಸಾ-8 ಲೋಕೇಶ ನ ಭುಜಕ್ಕೆ ತಿವಿದನು ಎಂದರೆ ಸರಿಯಲ್ಲ. ನಾನು ಭಯದಿಂದ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದೆ ಎಂದರೆ ಸರಿಯಲ್ಲ. ನಂತರ ಎಲ್ಲಾ ಆರೋಪಿಗಳು ಸೇರಿಕೊಂಡು ಡಾಬಾದಲ್ಲಿದ್ದ ವಸ್ತುಗಳನ್ನು ಟಾಟಾಎಸ್ ವಾಹನಕ್ಕೆ ತುಂಬಿಕೊಂಡು ಹೆಚ್ ಕ್ರಾಸ್ ಕಡೆಗೆ ಹೋದರು, ಎಲ್ಲಾರು ಸೇರಿ ಡಾಬಾ ಮುಂಭಾಗದಲ್ಲಿ ಹಾಕಿದ ಫ್ಲೆಕ್ಸ್ ಬೋರ್ಡ್ ನ್ನು ಒಡೆದು ಹಾಕಿ ಮತ್ತು ಡಾಬಾದ ಹೊರಗಡೆ ಹಾಕಿದ ಸಿಸಿಟಿವಿ, ಶೋ ಗೆ ಹಾಕಿದ ಮನೆ ಗಂಟೆಯನ್ನು ಒಡೆದು ಹಾಕಿದರು ಮತ್ತು ಕ್ಯಾಶ್ ಟೇಬಲ್ ನ್ನು ಬೀಸಾಡಿದರು ಎಂದರೆ ಸರಿಯಲ್ಲ.

3. ನಂತರ 1 ನೇ ಆರೋಪಿ ಹೆಚ್ ಕ್ರಾಸ್ ಕಡೆಗೆ ಹೋದರು ಎಂದರೆ ಸರಿಯಲ್ಲ. ನಂತರ ಉಳಿದ ಆರೋಪಿಗಳು ಡಾಬಾದ ಬಳಿ ನಿಂತುಕೊಂಡು ಮಾತನಾಡುತ್ತಿದ್ದಾಗ ರಮೇಶ್ ಮತ್ತು ಮೃತೆ ಕವಿತಾ ಮತ್ತು ವಿಜಯಮ್ಮ ಕಾರಿನಲ್ಲಿ ಬಂದು, ಯಾವನೋ ನಮ್ಮ ಡಾಬಾದಲ್ಲಿನ ಸಾಮಾನುಗಳನ್ನು ತೆಗೆದುಕೊಂಡು ಹೋದವನು ಎಂದು ಮಚ್ಚನ್ನು ತೆಗೆದುಕೊಂಡು ಅವರ ಮೇಲೆ ಹಲ್ಲೆ ಮಾಡಲು ಚಾಸಾ-1 ರಮೇಶ್ ಪ್ರಯತ್ನಿಸಿದನು ಎಂದರೆ ಸರಿಯಲ್ಲ. 3 ನೇ ಆರೋಪಿ ಕೇಶವ ಮೂರ್ತಿ ತಪ್ಪಿಸಿಕೊಂಡು ಹೋಗಲು ಪ್ರಯತ್ನ ಪಟ್ಟಾಗ, ಮೃತೆ ಕವಿತಾ ಕೇಶವ ಮೂರ್ತಿಗೆ ಕಾರದ ಪುಡಿ ಎರಚಿದಳು ಎಂದರೆ ಸರಿಯಲ್ಲ. ನಂತರ ಅಲ್ಲಿಂದ 3, 4 ನೇ ಆರೋಪಿ ಮತ್ತು ಚಾಸಾ-7 ವಿಜಯ್ ಕುಮಾರ್ ತಪ್ಪಿಸಿಕೊಂಡು ಓಡಿಹೋದರು ಎಂದರೆ ಸರಿಯಲ್ಲ. ನಂತರ 4 ಜನರು ಅವರನ್ನು

ಸುತ್ತುವರೆದು ಮಚ್ಚಿನಿಂದ ಹಲ್ಲೆ ಮಾಡಲು ಮುಂದಾದರು, ಆಗ 2 ನೇ ಆರೋಪಿ ಮಧುಕುಮಾರ್ ಡಾಬಾದಲ್ಲಿದ್ದ ಒಂದು ಚಾಕುವನ್ನು ತೆಗೆದುಕೊಂಡು ಮೃತೆ ಕವಿತಾಳ ಹೊಟ್ಟೆಗೆ ಮತ್ತು ರಮೇಶ್ ನ ಬೆನ್ನಿಗೆ ತಿವಿದನು. ಅವರಿಗೆ ರಕ್ತಸಿಕ್ತ ಗಾಯವಾಗಿ ನೆಲಕ್ಕೆ ಬಿದ್ದು ಒದ್ದಾಡುತ್ತಿದ್ದಾಗ, ಎಲ್ಲಾ ಆರೋಪಿತರು ಸ್ಥಳದಿಂದ ಓಡಿಹೋದರು ಎಂದರೆ ಸರಿಯಲ್ಲ. ನಾನು ಹತ್ತಿರಕ್ಕೆ ಹೋಗಿ, ನಾವು ರಮೇಶ್ ರವರ ಕಾರಿನಲ್ಲಿ ರಮೇಶ್ ಮತ್ತು ಕವಿತಾ ಳನ್ನು ಸೃಷ್ಟಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೃತೆ ಕವಿತಾಳನ್ನು ಬೆಂಗಳೂರಿನ ಆಸ್ಪತ್ರೆಗೆ ಸೇರಿಸಿದೆವು, ಅಲ್ಲಿ ಕವಿತಾಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಳು ಎಂದರೆ ಸರಿಯಲ್ಲ.

ನನಗೆ ಈಗ ಓದಿ ಹೇಳಿದ ರೀತಿ (ಹೀಗೆ 15 ದಿನಗಳಿಂದ ------------------ಚಿಕಿತ್ಸೆ ಪಡಿದುಕೊಂಡಿರುವುದಿಲ್ಲ) ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಸದ ಹೇಳಿಕೆಯ ಭಾಗವನ್ನು ನಿಪಿ.24 ಎಂದು ಗುರ್ತಿಸಲಾಯಿತು. ನಾನು ಘಟನೆಯನ್ನು ಕಣ್ಣಾರೆ ಕಂಡಿದ್ದರೂ ಸಹ, ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಆರೋಪಿತರಿಗೆ ಅನುಕೂಲ ಆಗಲು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಶ್ರೀ ಕೆ.ಪಿ.ಆರ್. ವಕೀಲರಿಂದ ಆರೋಪಿತರ ಪರವಾಗಿಃ</u>**

ಶ್ರೀ ಕೆ.ಪಿ.ಆರ್. ವಕೀಲರು ಹಾಜರಿದ್ದು ತಮ್ಮದು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಿದ್ದಾರೆ, ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆ ಇಲ್ಲ.**

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ. ಹೇ. ಕೇ. ಸ. ಒ.

(ರವೀಂದ್ರ. ಆರ್)
6 ನೇ ಹೆಚ್ಚುವರಿ  ಜಿಲ್ಲಾ ಮತ್ತು ಸತ್ರ  ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.